


# ವಿಂಚೆಸ್ಟರ್‌ನ ವಿಚಿತ್ರ ಮಹಲ್

■ ಎಸ್. ಪ್ರಭಾವತಿ

ಕ್ಯಾಲಿಫೋರ್ನಿಯಾದ ವಿಚಿತ್ರ, ಆಕರ್ಷಕ 'ವಿಂಚೆಸ್ಟರ್ ಮಿಸ್ಟ್ರಿ ಹೌಸ್', ತನ್ನ ವಾಸ್ತುಶಿಲ್ಪ ಶೈಲಿಗೆ, ಬೃಹತ್ ಗಾತ್ರಕ್ಕೆ ಹೆಸರುವಾಸಿ. ಎಲ್ಲಿಯೂ ತಲುಪದ ಮೆಟ್ಟಿಲುಗಳು, ಗೋಡೆಗಳಿಗೆ ತೆರೆದುಕೊಳ್ಳುವ ಬಾಗಿಲುಗಳು ಮತ್ತು ಕೋಣೆಗಳ ಮೇಲಿರುವ ವಿಚಿತ್ರ ರೀತಿಯ ಕಿಟಕಿಗಳು ಬಂಗಲೆಗೆ ಬರುವವರಿಗೆ ನಿಗೂಢ ಎನಿಸುತ್ತವೆ.

ವಿಂಚೆಸ್ಟರ್ ಎಂಬ ವ್ಯಕ್ತಿ ಗನ್ ಕಂಪನಿಯ ಅಧ್ಯಕ್ಷರಾಗಿದ್ದರು. ಜನಪ್ರಿಯ ಬಂದೂಕು ತಯಾರಿಕೆ ಹಾಗೂ ಮಾರಾಟಗಾರರಾಗಿದ್ದು, ಅಪಾರ ಸಂಪತ್ತಿನ ಅಧಿಪತಿಯಾದರು. ವಿಂಚೆಸ್ಟರ್ ದಂಪತಿಗೆ ಜನಿಸಿದ ಮಗು ಆರು ವಾರದಲ್ಲೇ ಅಪರೂಪದ ಕಾಯಿಲೆಯಿಂದ ಮೃತಪಟ್ಟಿತು. ಸ್ವಲ್ಪ ಸಮಯದಲ್ಲೇ ವಿಂಚೆಸ್ಟರ್ ಕೂಡ ನಿಧನರಾದರು. ಆ ಸಂಪತ್ತಿನ ಒಡೆತನದ ಉತ್ತರಾಧಿಕಾರಿ ಸಾರಾ ವಿಂಚೆಸ್ಟರ್– ವಿಶ್ವದ ಅತ್ಯಂತ ಶ್ರೀಮಂತ ಮಹಿಳೆಯರಲ್ಲಿ ಮೊದಲಿಗರಾದರೂ, ಮೂಢನಂಬಿಕೆಯ ಮಹಿಳೆಯೂ ಆದ ಸಾರಾ, ತಾನು ಶಾಪಗ್ರಸ್ತಳೆಂದು ಖಿನ್ನತೆಗೆ ಒಳಗಾದರು.

**ಸ್ಥಳ ವಿಶೇಷ**

ಪತಿ ತಯಾರಿಸಿದ್ದ ಬಂದೂಕುಗಳಿಂದ ಕೊಲೆಯಾದ ಜನರ ಆತ್ಮಗಳು ತನ್ನ ಕುಟುಂಬದ ಮೇಲೆ ಶಾಪ ಉಂಟು ಮಾಡಿವೆ ಎಂಬುದು ಸಾರಾಗೆ ಕಾಡತೊಡಗಿದ್ದು, ಮನಸ್ಸಿನ ಶಾಂತಿಗಾಗಿ ಪಶ್ಚಿಮದ ಸ್ಯಾನ್ ಜೋಸೆಯಲ್ಲಿ ಎಂಟು ಕೋಣೆಯ, ಹಳೆಯ ತೋಟದ ಮನೆಯನ್ನು ಖರೀದಿಸಿ ಅದನ್ನು ನವೀಕರಿಸಲು ಪ್ರಾರಂಭಿಸಿದರು. ಮನೆಯ ನಿರ್ಮಾಣವು 1884ರಲ್ಲಿ ಪ್ರಾರಂಭವಾಗಿ 1922ರವರೆಗೆ ನಿರಂತರವಾಗಿ ಮುಂದುವರೆಯಿತು. ದಿನದ 24 ಗಂಟೆಯೂ, ವಾರದ 7 ದಿನವೂ ಕಟ್ಟಡ ನಿರ್ಮಾಣ ಕೆಲಸ ನಿಲ್ಲದೆ ದೊಡ್ಡ ಮಹಲಾಯಿತು. ಮತ್ತೆ ಮತ್ತೆ ಕೆಡವುತ್ತಲೇ ಇದ್ದ ಸಮಯದಲ್ಲೇ ಪ್ರಬಲ ಭೂಕಂಪನದಲ್ಲಿ ಸಿಲುಕಿ ಹೇಗೋ ಪಾರಾಗಿ ಮತ್ತೊಮ್ಮೆ ಸಾರಾ ವಿಂಚೆಸ್ಟರ್ ಮಹಲಿನ ನಿರ್ಮಾಣಕ್ಕಾಗಿಯೇ ಹೆಚ್ಚು ಹಣ ವ್ಯಯ ಮಾಡುತ್ತಾ ಕೊನೆಯುಸಿರೆಳೆದರು.

ಈ ಮಿಸ್ಟ್ರಿ ಹೌಸ್ ವಿಕ್ಟೋರಿಯನ್ ಮತ್ತು ಕ್ವೀನ್‌ಆನ್ ಶೈಲಿಗಳ ಮಿಶ್ರಣ ಹೊಂದಿದೆ. ಜಟಿಲ ತರಹದ ಕಾರಿಡಾರ್‌ಗಳು ಮತ್ತು ಅಲಂಕರಿಸಲಾದ ಕೋಣೆಗಳು, ಮರದ ವಿಸ್ತಾರ ಒಳಾಂಗಣಗಳು, ಬಣ್ಣದ ಗಾಜಿನ ಕಿಟಕಿಗಳನ್ನು ಹೊಂದಿದೆ. ವಿಚಿತ್ರಗಳ ಹೊರತಾಗಿಯೂ, ಮಹಲಿನ ಕರಕುಶಲತೆ ಒಂದು ಮೇರುಕೃತಿಯಂತೆ ತೋರುತ್ತದೆ. ಮಹಲಿನ ಸುತ್ತಲಿನ ಉದ್ಯಾನ ಮತ್ತೊಂದು ಪ್ರಮುಖ ಆಕರ್ಷಣೆ. ಉದ್ಯಾನದಲ್ಲಿ ಕೆಲವು ಸ್ವತಃ ಸಾರಾ ವಿಂಚೆಸ್ಟರ್ ನೆಟ್ಟ ಸಸ್ಯಗಳೇ ಆಗಿವೆ.

ಸಾರಾ ವಿಂಚೆಸ್ಟರ್ ತನ್ನ ಮರಣದವರೆಗೂ ಮನೆ ನಿರ್ಮಾಣ ಕೆಲಸವನ್ನು ಏಕೆ ಮುಂದುವರೆಸಿದಳು? ಮನೆ ಪೂರ್ಣಗೊಂಡಿದೆ ಎಂದು ಘೋಷಿಸಿದ ತಕ್ಷಣ ಅವಳು ಮರಣ ಹೊಂದುತ್ತಾಳೆ ಎಂಬ ಮೌಢ್ಯವನ್ನು ಆಕೆ ನಂಬಿದ್ದಳು ಎಂದು ಹಲವರು ಹೇಳುತ್ತಾರೆ. ಇತರರು, ಅವಳನ್ನು ಹಿಂಬಾಲಿಸುವ ಆತ್ಮಗಳನ್ನು ಗೊಂದಲಗೊಳಿಸಲು ಚಕ್ರವ್ಯೂಹವನ್ನು ಸೃಷ್ಟಿಸಿದಳು ಎಂದು ಹೇಳುತ್ತಾರೆ. ಕಾರಣ ಏನೇ ಇದ್ದರೂ ವಿಂಚೆಸ್ಟರ್ ಮಿಸ್ಟ್ರಿ ಹೌಸ್ ನಮ್ಮ ಮನಸ್ಸಿನಲ್ಲಿ ದೀರ್ಘಕಾಲ ಉಳಿಯುವುದಂತೂ ಖಚಿತ. ■

## ಶ್ರ್ಯೂಸ್ ಬೆರಿ ಸಿಟಿ 'ಪುಣೆ'

ಭಾರತದ ಸಾಂಸ್ಕೃತಿಕ ನಗರ, ಕೋಟೆ ನಗರ, ಸೈಕಲ್ ಕ್ಯಾಪಿಟಲ್ ಎಂದೆಲ್ಲಾ ಹೆಸರು ಪಡೆದಿರುವ ಪುಣೆ, ಶ್ರ್ಯೂಸ್ ಬೆರಿ ಬಿಸ್ಕತ್ ಸಿಟಿ ಅಂತಲೂ ಈಗ ಫೇಮಸ್ ಆಗಿದೆ. ಪುಣೆಯ ಕ್ಯಾಂಪ್ ರಸ್ತೆಯ ಈಸ್ಟ್ ಸ್ಟ್ರೀಟ್‌ನಲ್ಲಿ ಸಾಗಿದರೆ ಅಲ್ಲಲ್ಲಿ ಕಾಣಿಸುವ ಐದಾರು ಹಳೆಯ ಪಾರ್ಸಿ ಬೇಕರಿಗಳಲ್ಲಿ, ಅದರಲ್ಲೂ 1955ರಲ್ಲಿ ಆರಂಭವಾದ ಕಯಾನಿ ಬೇಕರಿಯಲ್ಲಿ ಶ್ರ್ಯೂಸ್ ಬೆರಿ ಬಿಸ್ಕತ್‌ಗಾಗಿ ದಿನಂಪ್ರತೀ ಜನ ಕ್ಯೂ ನಿಲ್ಲುತ್ತಾರೆ. ಎಲ್ಲೆಲ್ಲೂ ಈ ಬಿಸ್ಕತ್ ಜನಪ್ರಿಯತೆ ಹಬ್ಬಿರುವುದರಿಂದ ಇದನ್ನೊಮ್ಮೆ ತಿನ್ನಲೇಬೇಕು ಎಂದು ಗಂಟೆಗಟ್ಟಲೆ ಕಾದು ನಿಲ್ಲುವ, ಖಾಲಿಯಾದರೆ ಆರ್ಡರ್ ಕೊಟ್ಟು ಹೋಗುವವರ ಸಂಖ್ಯೆ ಇಲ್ಲಿ ಜಾಸ್ತಿಯಾಗುತ್ತಲೇ ಇರುತ್ತದೆ. ಭಾರೀ ಬೇಡಿಕೆಯಿರುವುದರಿಂದ ಬಿಸ್ಕತ್ ಮಧ್ಯಾಹ್ನದೊಳಗೆ ಮಂಗಮಾಯವಾಗಿಬಿಡುತ್ತದೆ. ಹಬ್ಬದ ದಿನಗಳಲ್ಲಂತೂ ಬೇಡಿಕೆ ಬೆಟ್ಟದಂತೆ ಏರುತ್ತದೆ. ಹಾಗಾಗಿ ಬಯಸಿದ ಕೂಡಲೇ ಸಿಗುವ ಬಿಸ್ಕತ್ ಇದಲ್ಲ. ತಾವು ಹೋದಾಗ ಬಿಸ್ಕತ್ ಖಾಲಿಯಾಗಿದೆ ಎಂದು ತಿಳಿದು ನಿರಾಶೆಯಿಂದ ಹೋದ ಪ್ರವಾಸಿಗರು ಅದೆಷ್ಟೋ ಮಂದಿ ಇದ್ದಾರೆ.

ಇಂದು ಖಾಲಿಯಾದರೆ ನಾಳೆ ಸಿಕ್ಕೇ ಸಿಗುತ್ತದೆಂದು ನಾಳೆಯೂ ಬೇಕರಿಗೆ ದಾಂಗುಡಿ ಇಡುವ ಸ್ಥಳೀಯರಿಗೆ ಈ ಬಿಸ್ಕತ್ ನಿಜಕ್ಕೂ ಕುಲದೇವರಂತೆ. ಟೀ ಸಮಯ ಆನಂದಮಯಗೊಳಿಸುವ ಗೆಳೆಯನಂತೆ. ಮನೆಗೆ ಬಂದ ದೂರದ ನೆಂಟರಿಗೂ ಒಂದೆರಡು ಬಿಸ್ಕತ್ ಸ್ಯಾಂಪಲ್ ಕೊಟ್ಟು, ಅವರಿಗೆ ಇಷ್ಟವಾದರೆ ಮರಳಿ ಹೋಗುವಾಗ ಬಿಸ್ಕತ್ ಪೊಟ್ಟಣವನ್ನೇ ಪ್ರೀತಿಯಿಂದ ಕೊಡುವವರಿದ್ದಾರೆ. ಸ್ನೇಹಿತರಿಗೆ ಏನಾದರೂ ಕೊಡಬೇಕು ಅನ್ನಿಸಿ ದುಬಾರಿ ಶ್ರ್ಯೂಸ್ ಬೆರಿ ಬಿಸ್ಕತ್ ಉಡುಗೊರೆ ಕೊಡುವವರೂ ಇದ್ದಾರೆ.

ಈ ಬಿಸ್ಕತ್‌ಗೆ ಅರ್ಧ ಕೆ.ಜಿ.ಗೆ ರೂ. 450ರಿಂದ 550ರಷ್ಟು ಬೆಲೆಯಿದೆ. ಮೊಟ್ಟೆರಹಿತ ಮತ್ತು ಮೊಟ್ಟೆ ಸಹಿತ ಬಿಸ್ಕತ್, ಶ್ರ್ಯೂಸ್ ಬೆರಿ ಕೇಕ್ ಕೂಡ ಲಭ್ಯವಿದೆ. ಹಾಗಾಗಿ ಶ್ರ್ಯೂಸ್ ಬೆರಿ ಕೇಕ್, ಬಿಸ್ಕತ್ ಪ್ರಿಯರಿಗೆ ಇಲ್ಲಿ ಆಯ್ಕೆಗಳು ಧಾರಾಳ. ಸುಮಾರು 20 ಬಗೆಯ ಬಿಸ್ಕತ್‌ಗಳಿದ್ದರೂ, ಶ್ರ್ಯೂಸ್ ಬೆರಿ ಬಿಸ್ಕತ್‌ನ ಸ್ವಾದಿಷ್ಟ ರುಚಿಗೆ ಶರಣಾಗಲು ಬರುವವರೇ ಜಾಸ್ತಿ.

ಬೇಕರಿಯಿಂದ ಮನೆಗೆ ಬಂದು, ಬಿಸ್ಕತ್ ರಟ್ಟಿನ ಪೊಟ್ಟಣ ಬಿಚ್ಚಿದಾಗ ಒಮ್ಮೆಲೇ ಮುತ್ತಿಕ್ಕಿ ಬಂದ ಅದರ ಪರಿಮಳದಲ್ಲಿ ಪುಣೆಯ ಸಂಸ್ಕೃತಿಯೇ ಮೈತಳೆದು ಬಂದಂತಿತ್ತು. ಎಷ್ಟೋ ಕಾಲದಿಂದ ಬೆಳೆಯುತ್ತ ಬೆಳೆಯುತ್ತ ಹಲವು ತಲೆಮಾರುಗಳಿಗೆ ರುಚಿ ಹತ್ತಿಸಿದ ಶ್ರ್ಯೂಸ್ ಬೆರಿ ಎನ್ನುವ ಸ್ವರ್ಗದ ತುಣುಕಿನ ಬಗ್ಗೆ ನನ್ನಲ್ಲಿ ವರ್ಣಿಸಲಾಗದ ಒಂದು ಸಾರ್ಥಕತೆ ಮೂಡಿತು. ಅದೇ ಖುಷಿಯಲ್ಲಿ ಚಹಾದ ಲೋಟಕ್ಕೆ ಬಿಸ್ಕತ್ ಮುಳುಗಿಸಿ ಬಾಯಲ್ಲಿಟ್ಟೆ. ಆಹಾ ಬೆಣ್ಣೆಯಲ್ಲಿಯೇ ಕರಗಿ ಹೋದಂತಹ ತಾಜಾ ಅನುಭೂತಿಯಲ್ಲಿ, ಗರಿಗರಿಯಾದ ಬಿಸ್ಕತ್‌ನ ಕೋಮಲತೆಯಲ್ಲಿ ಶ್ರ್ಯೂಸ್ ಬೆರಿ ಬಿಸ್ಕತ್ ಇನ್ನಷ್ಟು ಹೊಸದಾಗಿ ಕಾಡತೊಡಗಿತು. ನೀವೂ ಬಿಸ್ಕತ್ ಪ್ರಿಯರಾಗಿದ್ದರೆ ಪುಣೆಗೆ ಹೋದಾಗ ಶ್ರ್ಯೂಸ್ ಬೆರಿ ಬಿಸ್ಕತ್ ತಿಂದು ಕರಗಿಹೋಗುವ ಸುಖವನ್ನು ಕಳೆದುಕೊಳ್ಳಬೇಡಿ. ■